ಫಾರೆಸ್ಟ್ ಇಲಾಖೆ.

ಇಸ್ತಿಹಾರ್.

ತಾರೀಖು ನೆ ಜನವರಿ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಕೋಲಾರ ಡಿಸ್ಟ್ರಿಕ್ಟ್ ಮಾಲೂರು ರೇಂಜು ಪ್ಲಾಂಟೇಷನ್‌ಗಳಲ್ಲಿ ಈ ಕೆಳಗೆ ನಮೂದಿಸಿರುವ ತಪಶೀಲು ಮೇರೆ ವಣಗಿದ ಕ್ಯಾಸರೀನಾ ಮರಗಳನ್ನು ಕಡದು ಲಾಟು ಹಾಕಿರುವದು 1909ನೆ ಇಸವಿ ಫೆಬ್ರವರಿ ಮಾಹೆಯಲ್ಲಿ ಈ ಕೆಳಗೆ ಕಂಡ ಪಟ್ಟೀಲಿ ನಮೂದು ಇರುವ ತಾರೀಖುಗಳಲ್ಲಿ ಮತ್ತು ಸ್ಥಳಗಳಲ್ಲಿ ಮಧ್ಯಾಹ್ನ 2 ಘಂಟೆಗೆ ಮಾಲೂರು ಫಾರೆಸ್ಟು ರೇಂಜಾಫಿಸರವರಿಂದ ಬಹಿರಂಗವಾದ ಹರಾಜು ಮಾಡಲ್ಪಡುತ್ತೆ :—

ನಂಬರು.	ಪ್ಲಾಂಟೇಷ್ ಹೆಸರು ಅಥವಾ ಸ್ಥಳ.	ಪಿಕರಿಯಾಗುವ ಸ್ಥಳಕ್ಕೆ ಯಾ ನೇಮಿಸುವ ರೈಲ್ವೆ ಸ್ಟೇಷ್‌ಗೆ ಫಾಸಲೆ.	ಹರಾಜು ಸ್ಥಳ.	ಹರಾಜು ತಾರೀಖು.	ಷರಾ.
1	ಬೆಳ್ಳಾವಿ ...	4 ಮೈಲಿ ಮಾಲೂರಿಗೆ ...	ಮಾಲೂರು.	3—2—09	ಒಂದೊಂದು ಲಾಟು ಸುಮಾರು 25-30 ರಕ್ಕೆ ಒಂದು ಲಾಟುನಂತೆ.
2	ಕಾಡಮುತ್ಸಂದ್ರ ...	8 ಡಿಟೋ ...			
3	ರಾಮಚಂದ್ರಪುರ ...	4 ಡಿಟೋ ...			
4	ಮುಲ್ಲಪ್ಪನಹಳ್ಳಿ ...	3 ಡಿಟೋ ...	ಮಲ್ಲಪ್ಪನಹಳ್ಳಿ ಪ್ಲಾಂಟೇಷನಲ್ಲಿ.	4—2—09	
5	ಹೊಸಕುರಂಡಹಳ್ಳಿ ...	4 ಡಿಟೋ ...	ಹೊಸಕುರಂಡಹಳ್ಳಿ ಪ್ಲಾಂಟೇಷ್.	5—2—09	
6	ಲಕ್ಷ್ಮಿಸಾಗರ ...	10 ಡಿಟೋ ...	ಯಕವಂತಪುರ ಪ್ಲಾಂಟೇಷನ್ನಲ್ಲಿ.	6—2—09	
7	ಯಕವಂತಪುರ ...	11 ಡಿಟೋ ...			
8	ವಕ್ಕಲೇರಿ ...	10 ಡಿಟೋ ...	ವಕ್ಕಲೇರಿ ಪ್ಲಾಂಟೇನ್ನಲ್ಲಿ.	8—2—09	
9	ಬೈಯಪ್ಪನಹಳ್ಳಿ ...	5 ಮೈಲಿ ಕೋಲಾರಕ್ಕೆ.	ಪ್ಲಾಂಟೇಷನ್ನಲ್ಲಿ.	9—2—09	

2. ಸದರಿ ಸವುದೇ ಕೊಂಡುಕೊಳ್ಳಲು ಇಷ್ಟವುಳ್ಳವರು ಲಾಟುವಾರು ಅಥವಾ ಒಟ್ಟು ಲಾಟುಗೆ ಇಷ್ಟೆಂದು ದರಖಾಸ್ತು ಮಾಡಬಹುದು.

3. ಹರಾಜು ಮಾಡುವ ಆಫಿಸರು ಯಾವ ಸವಾಲನ್ನೆ ಆಗಲಿ ಯಾವ ಕಾರಣವೂ ನಮೂದಿಸದೇ ತಿರಸ್ಕರಿಸಲು ಸ್ವತಂತ್ರ ರಾಗಿರುತ್ತಾರೆ.

4. ಹರಾಜು ಖೈದಾದ ಕೂಡ್ಲೇ ಅಂಗೀಕರಿಸಲ್ಪಟ್ಟ ಸವಾಲುದಾರನು ಹರಾಜು ಮೊಬಲಗಿನಲ್ಲಿ ಕಾಲು ಹಿಸ್ಸೆಯನ್ನು ಪಾವತಿ ಮಾಡಿ ಬಾಕಿದನ್ನು ಹರಾಜು ಪುಂಜಾದಾದ ಸಂಗತಿ ತಿಳಿಸಿದ ಮೂರು ದಿವಸದೊಳಗೆ ಪಾವತಿ ಮಾಡತಕ್ಕದ್ದು ತಪ್ಪಿದರೆ ಸವಾಲುದಾರನು ಪಡೆದ ಸವುದೆಯು ಪುನಃ ಹರಾಜು ಮಾಡಲ್ಪಟ್ಟು ಅದರಿಂದ ಉಂಟಾಗುವ ಲುಕಸಾನಿಗೆ ಮೊದಲು ಸವಾಲ್ದಾರನನ್ನು ಗುರಿಪಡಿಸಲ್ಪಡುತ್ತೆ. ಸಫೆ ಬಂದಲ್ಲಿ ಈತನ ಬಾಧ್ಯತೆ ಏನೂ ಇರುವದಿಲ್ಲ. ಶಿವಾಯಿ ಈತನ ತೇವಣಿ ಯಾ ಪಾವತಿ ಮಾಡಿದ ಇತರೇ ಪೊಟಲಗು ಸಹಾ ಸರ್ಕಾರಕ್ಕೆ ದಂಡವಾಗಿ ತಗದುಕೊಳ್ಳಲ್ಪಡುತ್ತೆ.

5. ಪೂರಾ ಮೊಬಲಗು ಪಾವತಿ ಮಾಡಿದ ನಂತರ ಸದರಿ ಸವಾಲುದಾರನು ಈ ಕೆಳಗೆ ನಮೂದಿಸಿರುವ ಷರತ್ತುಗಳಿಗೆ ಬದ್ಧನಾಗಿ ಒಂದು ಕರಾರು ಬರದುಕೊಡತಕ್ಕದ್ದು :—

(1) ತಾನು ಕಿತ್ತಾವಾರು ಸಾಗಿಸುವ ಸವುದೆಗೆ ರೇಂಜು ಆಫಿಸರು ಯಾ ಚಾರ್ಜಿನಲ್ಲಿರುವ ಫಾರೆಸ್ಟರಿಂದ ರಹದಾರಿ ಪಡೆದುಸಾಗಿಸುವೆನೆಂದು,

(2) ಸೂರ್ಯಾಸ್ತಮಯ ನಂತರವಾಗಲಿ ಸೂರ್ಯೋದಯಕ್ಕೆ ಪೂರ್ವವಾಗಲಿ ಸವುದೆ ಸಾಗಿಸುವದಿಲ್ಲವೆಂದು,

(3) ತಾನಾಗಲಿ ತನ್ನ ಕಡೆಯವರಾಗಲಿ ಸವುದೆ ಸಾಗಿಸುವಲ್ಲಿ ಪ್ಲಾಂಟೇಷನಲ್ಲಿನ ಗಿಡಮರಗಳು ಕಡಿಯುವದು ಯಾ ಹಾನಿಪಡಿಸುವದಿಲ್ಲವೆಂದು,

(4) ತಾನಾಗಲಿ ತನ್ನ ಕಡೆಯವರಾಗಲಿ ಪ್ಲಾಂಟೇಷ ಸರಹದ್ದಿನಲ್ಲಿ ಅಡಿಗೆ ಮಾಡುವದು ಮತ್ತು ಬೆಂಕಿ ಹೊತ್ತಿಸುವದಿಲ್ಲವೆಂದು,

(5) ತಾನು ಸಾಗಿಸುವ ಸವುದೆ ಗಾಡಿಗಳು ರಹದಾರಿ ಸಹಿತ ಡಿಸ್ಟ್ರಿಕ್ಟು ಯಾ ಫಾರೆಸ್ಟು ಆಫಿಸರು ವಿಧಾಯಿಸುವ ಸ್ಥಳಗಳಲ್ಲಿ ಅಜಮಾಯಿಷಿ ಬಗ್ಗೆ ಹಾಜರು ಪಡಿಸುತ್ತೇನೆಂದು,

(6) ತಾನು ಪಡೆದ ವಿಶಿಷ್ಟ ಸವುದೆಯನ್ನು 1909ನೆ ಇಸವಿ ಏಪ್ರಿಲ್ ಖಚ್ಚೆರು ವಳಗಾಗಿ ಸಾಗಿಸಿಕೊಳ್ಳುತ್ತೇವೆಂದೂ, ಆರೀತಿ ಮಾಡಲು ತೃಪ್ತಿಕರವಾದ ಕಾರಣವಿಲ್ಲದೆ ತಪ್ಪಿದಲ್ಲಿ ಉಳಿಯುವ ಸೌದೆ ಸರ್ಕಾರಕ್ಕೆ ಸೇರಿಸಿಕೊಳ್ಳಬಹುದೆಂದು,

6. ಮೇಲ್ಕಂಡ ಷರತ್ತುಗಳಲ್ಲಿ ಯಾವದಕ್ಕಾದರೂ ತಪ್ಪಿದರೆ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರಿಗೆ ಯುಕ್ತ ತೋರಿದಂತೆ ಹರಾಜುದಾರನನ್ನು ಜುಲ್ಮಾನೆಗೆ ಯಾ ಫಾರೆಸ್ಟು ರೆಗ್ಯುಲೇಷನಲ್ಲಿ ನಮೂದಿರುವ ಶಿಕ್ಷೆಗೆ ಗುರಿಪಡಿಸಲ್ಪಡುತ್ತೆಂದು.

ಹೆಚ್. ರಾಮಯ್ಯ್ಯ,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಕೋಲಾರ ಡಿಸ್ಟ್ರಿಕ್ಟು.